ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ
ನ್ಯಾಯಾಲಯ, ತಿಪಟೂರು

**ಸಿ.ಸಿ. ನಂ. 8713/2022**

**ಸಿ.ಡಬ್ಲ್ಯೂ:1**
**ಪಿ.ಡಬ್ಲ್ಯೂ:1**

ದಿಃ **01.12.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯ ಹೆಸರು : ಜಗದೀಶ್ ಮೂರ್ತಿ
ತಂದೆ ಹೆಸರು : ಎ,ಬಿ ಉಮಾಪತಿ
ವಯಸ್ಸು : **68** ವರ್ಷ
ಉದ್ಯೋಗ : ವ್ಯಾಪಾರ
ವಾಸ ಸ್ಥಳ : ತಿಪಟೂರು

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನನ್ನ ಭಾವ ಯು.ಎಸ್ ಮಂಜುನಾಥ್ ಎನ್ನುವವರಿಗೆ ಸೇರಿದ ಮನೆಯು ಕೆ.ಆರ್ ಎಕ್ಸ್ ಟೆನ್ ಷನ್ ಸಾಯಿಬಾಬ ದೇವಸ್ಥಾನದ ಬಳಿ ಇದ್ದು ನನ್ನ ಭಾವ ತನ್ನ ಮಗನನ್ನು ನೋಡಲು ಕೆನಡಾ ಗೆ ಹೋಗಿದ್ದರು. ದಿಃ 24-07-2022 ರಂದು ನನ್ನ ಮನೆಯಲ್ಲಿದ್ದಾಗ ನನ್ನ ಭಾವನ ಮನೆಯ ಕೆಲಸದವರು ಚಾಸಾ-3 ರವರಿಗೆ ಕಳ್ಳತನ ಆಗಿದೆ ಎಂದು ತಿಳಿಸಿದರು. ನಂತರ ಚಾಸಾ-3 ರವರು ನನಗೆ ತಿಳಿಸಿದರು. ನಾನು ಅಲ್ಲಿ ಹೋಗಿ ನೋಡಿದಾಗ ದಿಃ 23-07-2022 ರ ರಾತ್ರಿ ಕಳ್ಳತನ ಆಗಿದೆ ಎಂದು ನನಗೆ ತಿಳಿದು ಬಂತು. ಈ ವಿಚಾರವಾಗಿ ನಾನು ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತೇನೆ. ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಮನೆಯಿಂದ ಸುಮಾರು 5 ಸಾವಿರ ಮೊತ್ತದ ಬೆಳ್ಳಿ ವಡವೆಗಳು ಕ್ಯಾಷ್ 8 ಸಾವಿರ ಹಾಗೂ ಒಂದು ಲ್ಯಾಪ್ ಟಾಪ್, ಮೊಬೈಲ್, ಹ್ಯಾಂಡಿಕ್ಯಾಮ್,

ಒಂದು ರಿಸ್ಟ್ ವಾಚ್ ಕಳ್ಳತನ ವಾಗಿತ್ತು. ದಿಃ 26-07-2022 ರಂದು ಪೊಲೀಸರು ಸ್ಥಳಕ್ಕೆ ಬಂದು ಸ್ಥಳದಲ್ಲಿ ಚಾಸಾ-3 ಮತ್ತು 4 ರವರ ಸಮಕ್ಷಮ ಪಂಚನಾಮೆಯನ್ನು ಬೆಳಗ್ಗೆ 10-30 ರಿಂದ 11-30 ಗಂಟೆವರೆಗೂ ಮಾಡಿರುತ್ತಾರೆ ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೊಲೀಸರ ಮುಂದೆ ಮುಂದುವರೆದ ಹೇಳಿಕೆ ಸಹ ಕೊಟ್ಟಿರುತ್ತೇನೆ. ನನಗೆ ಆರೋಪಿಯನ್ನು ಸಹ ಪೊಲೀಸರು ತೋರಿಸಿದ್ದರು. ಅವರನ್ನು ನೋಡಿದರೆ ನಾನು ಗುರುತಿಸುತ್ತೇನೆ. ವಿಸಿ ಮುಖಾಂತರ ತೋರಿಸುತ್ತಿರುವ ಆರೋಪಿಯೇ ನನಗೆ ಆ ದಿನ ಪೊಲೀಸರು ತೋರಿಸಿದ ವ್ಯಕ್ತಿಯಾಗಿದ್ದಾನೆ.

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

(ಮೊಹಮ್ಮದ್ ಆರೀಫುಲ್ಲಾ ಸಿ.ಎಫ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.